ಎಂ.ಎಸ್.ಮಂಜರ್, ಬಂಡಳ್ಳಿ

*ಮುಂಬರುವ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಲು ಯಾವ ಅರ್ಹತೆ ಇರಬೇಕು?*




ಒಂದೆರಡು ದರೋಡೆ, ಐದಾರು ಅತ್ಯಾಚಾರ, ಹತ್ತಾರು ಭೂ ಹಗರಣ, ಕನಿಷ್ಠ ಒಂದು ಕೊಲೆ ಮಾಡಿರಬೇಕಂತೆ!

ಎಚ್.ಸಿದ್ಧಾರ್ಥ ಹೆಬ್ಬಾರ್, ಈದು

*ಗಾಡ್ ಫಾದರ್‌ನ ಕನ್ನಡಭಾಷೆಯ ರೂಪ ಯಾವುದು?*

ದೇವಯ್ಯ!

ವಿ.ಹಮೀದ್, ವಿಟ್ಲ

*ಮಂಕುಬುದ್ಧಿಯ ಹುಡುಗಿಯನ್ನು ಕಂಡುಹಿಡಿಯುವುದು ಹೇಗೆ?*

ಕಬ್ಬನ್ ಪಾರ್ಕ್‌ಗೆ ಹೋಗಿ ನೋಡಿ; ಚಿಲ್ಲರೆ ಆಸೆಗಾಗಿ ಮೈಮರೆಯುವ ಮಂಕು ಹೆಣ್ಣುಗಳ ದಂಡೇ ಅಲ್ಲಿ ಸಿಗುತ್ತದೆ.

ಮಹೇಶ ಈರಣ್ಣ, ಲಿಂಗಸೂಗೂರು

*ಮಾತು ಬೆಳ್ಳಿ, ಮೌನ ಬಂಗಾರ; ಮಾನ...?*

ಬೆಳಕು.

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು

*ಹೆಣ್ಣಿನ ನಡುವಿನಲ್ಲಿ ಏನಿದೆ ರಾಮ್?*



ಮಗುವಿನ ಸೀಟ್!

ಆರ್.ಮಧುಸೂದನ್, ಹಾಸನ

*ಹುಚ್ಚರ ತಲೆಯಲ್ಲೂ ಪ್ರಶ್ನೆಗಳು ಹುಟ್ಟುವುದುಂಟಾ?*

ಹೆಚ್ಚು ಹೆಚ್ಚು ಪ್ರಶ್ನೆಗಳು ಹುಟ್ಟಿಯೇ ಹುಚ್ಚಿನ ಮಟ್ಟ ತಲುಪುವುದು; ನಿಮಗೂ ಹೆಚ್ಚು ಪ್ರಶ್ನೆಗಳು ಕಾಡುತ್ತಿದ್ದರೆ....... ಎಚ್ಚರ!

ಜಿ.ವಿ.ಎನ್. ಕೋಣನೂರು

*ಮೇಲುಸಂಪಾದನೆಗೂ, ಲಂಚಕ್ಕೂ ಇರುವ ವ್ಯತ್ಯಾಸವೇನು?*

ಒಂದು (ಬೋನಸ್, ಇತ್ಯಾದಿ) ಮೇಲು ಸಂಪಾದನೆ, ಮತ್ತೊಂದು ಕೀಳು ಸಂಪಾದನೆ!

ಎಂ.ಬಿ. ರಂಗಪ್ಪಸೆಟ್ಟಿ, ಮೋಕ

*ಕಠಿಣ ಪ್ರಶ್ನೆಗಳಿಗೆ ಉತ್ತರ ಕೊಡಲು ನಿಮಗೆ ಅಸಾಧ್ಯವಾದಾಗ ಕಸದ ಬುಟ್ಟಿಗೆ ಎಸೆಯುವಿರಂತೆ, ಇದು ನ್ಯಾಯವೆ?*

ಎಸೆಯುವುದು ನಿಜ, ಆದರೆ ಪ್ರಶ್ನೆ ಕಠಿಣವಾಗಿದ್ದಾಗಲ್ಲ, ಕೊಳಕಾಗಿದ್ದಾಗ, ಅಸಹ್ಯವಾಗಿದ್ದಾಗ!

ಪಿ.ಎಸ್.ಶ್ರೀವತ್ಸ, ಬೆಂಗಳೂರು

*ಜೀವನ: ಇದರ ನಿಜವಾದ ಅರ್ಥ?*

ಜೀವ, ವನ, ಜೀವನ ಪದಗಳ ಅರ್ಥ ನೀರು; ನೀರಿನಂತೆ ಪರಿಸ್ಥಿತಿಯ ಆಕಾರಕ್ಕೆ ಹೊಂದಿಕೊಳ್ಳುವುದೇ ಜೀವನ!

ಕುಮಾರ ಚಲವಾದಿ, ಹೊಳೆನರಸಿಪುರ

*ತಿಂಮನಿಗೂ, ಮಂಕುತಿಮ್ಮನಿಗೂ ಏನು ವ್ಯತ್ಯಾಸ?*

ತಿಂಮ ತಿಳಿಹೇಳುವ ಗೆಳೆಯ, ಮಂಕುತಿಮ್ಮ ವಿದ್ಯೆ ನೀಡುವ ಗುರು!

ಪಿ.ಜೆ. ರಾಘವೇಂದ್ರ, ಮೈಸೂರು

*ಅಂಗರಕ್ಷಕನನ್ನು ಪ್ರಾಣರಕ್ಷಕ ಎಂದು ಕರೆಯಬಾರದೇಕೆ?*

ಇಂದಿರಾ ಹತ್ಯೆಯ ನಂತರವೂ ಹೀಗೆ ಕೇಳುವಿರಲ್ಲಾ... ಅಕಟಕಟಾ!

ಹಾಡ್ಯ ಬಿ. ಜಯಾನಂದ, ಮೈಸೂರು

*ಅರವತ್ತಕ್ಕೆ ಅರುಳುಮರುಳು. ಎಪ್ಪತ್ತಕ್ಕೆ? ಎಂಬತ್ತಕ್ಕೆ?*

ಮರಳಿ ಅರಳು, ಮೊಮ್ಮಕ್ಕಳೊಡನೆ ಹೊರಳು.

ಎಂ.ಎಸ್.ಗುರುರಾಜಾಚಾರು, ಬಳ್ಳಾರಿ

*ಕಳೆದುಹೋದ ಕಾಲಕ್ಕೂ, ಕಳೆದುಹೋದ ಮಾನಕ್ಕೂ ಏನು ವ್ಯತ್ಯಾಸ?*

ಸನ್ಮಾರ್ಗದಲ್ಲೇ ನಡೆದರೆ ಕಳೆದ ಮಾನ ಸನ್ಮಾನವಾಗಿ ಹಿಂತಿರುಗೀತು. ಕಾಲ ಒನ್‌ವೇ!

ಎಂ.ಎನ್. ಸೋಮಶೇಖರ್, ಮೈಸೂರು

*ಹಣವಿಲ್ಲದೆ ಭಾಗ್ಯವಂತನಾಗಲು ಏನು ಮಾಡಬೇಕು?*

ಭಾಗ್ಯವಂತನ ಮಗಳನ್ನು ವರಿಸಬೇಕು.

## ಬಹುಮಾನಿತ ಪ್ರಶ್ನೆ

ಚೇತನ ವಿ. ಅಂಗಡಿ, ಬಿಜಾಪುರ

*ಕಷ್ಟ ಬಂದಾಗ ಕತ್ತೆ ಕಾಲು ಹಿಡಿ ಎನ್ನುತ್ತಾರೆ. ಮುಂದಿನ ಕಾಲೋ, ಹಿಂದಿನ ಕಾಲೋ?*

ಕಷ್ಟ ನಿವಾರಿಸುವ ಕೆಲಸ ನಿಧಾನವಾಗಿ ಶುರುವಾಗಬೇಕಾದರೆ ಮುಂದಿನ ಕಾಲು, ಕಿಕ್ ಸ್ಟಾರ್ಟ್ ಆಗಬೇಕಾದರೆ ಹಿಂದಿನ ಕಾಲು!

ಆರ್. ಕೃಷ್ಣಮೂರ್ತಿ, ಮಂಡ್ಯ

*ಪ್ರಳಯದಂತಹ ಮೂಢನಂಬಿಕೆಯ ಬಗ್ಗೆ ಸಾರ್ವಜನಿಕರಿಗೆ ನಿಮ್ಮಿಂದ ಉತ್ತರ?*

ಭವಿಷ್ಯ ಕೇಳುವುದು ಎಂಬ ಭೂತವನ್ನು ವರ್ತಮಾನದಲ್ಲಿ ಇರಿಸಿಕೊಳ್ಳದಿದ್ದರೆ ನಿಮ್ಮ ಭವಿಷ್ಯ ಚೆನ್ನಾಗಿರುತ್ತದೆ!

ಆರಿಫ್, ದಾವಣಗೆರೆ

*ಕ್ಯಾಟ್ ವಾಕ್‌ಅನ್ನು ಹುಡುಗಿಯರಿಗಿಂತಾ ಆಂಟಿಯರೇ ಹೆಚ್ಚು ಮಾಡುವುದು, ಏಕೆ?*

ಆಂಟಿಯರೇ ಕ್ಯಾಟ್‌ಗಳು, ಹುಡುಗಿಯರದಾದರೆ ಕಿಟನ್ ವಾಕ್ ಆಗುತ್ತದೆ!

ಜಯಲಕ್ಷ್ಮೀ, ತುಮಕೂರು

*ಸೋನಿಯಾಗಾಂಧಿಗೂ, ಇಂದಿರಾಗಾಂಧಿಗೂ ಏನು ವ್ಯತ್ಯಾಸ?*



ಹೇರ್‌ಸ್ಟೈಲ್, ಮೂಗು!

ಆಶಾರಾಣಿ, ಬೀದರ

*ಒಂದು ಸಾವಿರ ಪುರುಷರಿಗೆ 943 ಮಹಿಳೆಯರು ಮಾತ್ರ ಇರುವ ನಮ್ಮ ದೇಶದಲ್ಲಿ ವರದಕ್ಷಿಣೆ ಏಕೆ ಕೊಡಬೇಕು?*

943 ಮಹಿಳೆಯರೂ ಸ್ವಾವಲಂಬಿಗಳಾದರೆ ಖಂಡಿತ ಬೇಡ; ಅವಲಂಬನೆಯೇ ಅನಿಷ್ಟಮಾರ್ಗದ ರೂವಾರಿ.

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್

*ಹಾಲು ಕುಡಿಯೋ ಬೆಕ್ಕಿಗೆ ಆಲ್ಕೋಹಾಲ್ ಕುಡಿಸಿದರೆ ಹೇಗಿರುತ್ತೆ ರಾಮ್‌ಜೀ?*

ಸೀಳುನಾಯಿಗೇ ಸವಾಲು ಹಾಕಿ ಸೀಳುಸೀಳಾಗುತ್ತದೆ.

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.

*ಸುಖವನ್ನು ಬಯಸಿ ಸ್ವಾತಂತ್ರ್ಯವನ್ನು ಕಳೆದುಕೊಂಡವನನ್ನು ಏನೆಂದು ಕರೆಯಬೇಕು?*

ಮನೆ ಅಳಿಯ!

■ ರಾಮ್